**ದಿನಾಂಕಃ 05-03-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು ಃ 1 ನೇ ಎದುರುದಾರ ಪರ ಶ್ರೀ ಎಸ್.ಎ.ಡಿ ವಕೀಲರಿಂದಃ**

ಈಗ ನನ್ನ ವಯಸ್ಸು 53 ವರ್ಷ ಇರುತ್ತವೆ. ಅಪಘಾತವು ನನ್ನ ತಪ್ಪಿನಿಂದ ಆಗಿರುತ್ತದೆ ಎಂದರೆ ಸರಿಯಲ್ಲ. ನಮ್ಮ ಕಾರಿಗೆ ಡಿ.ಎಲ್. ವಿಮೆ ಇರುತ್ತವೆ. ಸದರಿ ಅಪಘಾತಕ್ಕೆ ವಿಮಾ ಕಂಪನಿಯ ಪರಿಹಾರ ಕೊಡಲು ಬಾದ್ಯಸ್ಥರು ಇರುತ್ತಾರೆ ಎಂದರೆ ಸರಿ. ವಾಹನದ ಮಾಲಕ ಯಾವುದೇ ರೀತಿ ಜವಾಬ್ದಾರರು ಅಲ್ಲ ಎಂದರೆ ಸರಿ.

**ಪಾಟೀ ಸವಾಲು ಃ 2 ನೇ ಎದುರುದಾರ ಪರ ಶ್ರೀ ಆರ್.ಎನ್.ಡಿ ವಕೀಲರಿಂದಃ**

ನನ್ನ ಹುಟ್ಟಿದ ದಿನಾಂಕ 01-06-1967 ಇರುತ್ತದೆ. 2023 ರಲ್ಲಿ ನನಗೆ 53 ವರ್ಷಗಳು ನಡೆಯುತ್ತಿದ್ದವು. ನನ್ನ ಗಾಯದ ಪ್ರಮಾಣ ಪತ್ರದಲ್ಲಿ ನಾನು ಪೋಲೀಸರಿಗೆ ನನ್ನ ವಯಸ್ಸನ್ನು ನಾನೇ ಹೇಳಿ ಬರೆಸಿರುತ್ತೇನೆ. ನನಗೆ 2023 ರಲ್ಲಿ 56 ವರ್ಷಗಳು ನಡೆಯುತ್ತಿದ್ದವು, ನಾನು ಅರಣ್ಯ ಇಲಾಖೆಯಲ್ಲಿ ದಿನಗೂಲಿಯಂತೆ ಕೆಲಸ ಮಾಡುತ್ತಿದ್ದೆ, ಅದರಿಂದ ನಾನು ತಿಂಗಳಿಗೆ ರೂ.23,480/- ಅದಾಯ ಬರುತ್ತಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ರೂ.18,000/- ಸಂಬಳ ತೆಗೆದುಕೊಳ್ಳುತ್ತಿದ್ದೇನು ಎಂದು ನುಡಿಯುತ್ತಾರೆ. 2023 ರ ವೇತನ ಪ್ರಮಾಣ ಪತ್ರ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನನಗೆ 2023 ರಲ್ಲಿ 18,000/- ಇದ್ದರೂ ನಾನು ನಮ್ಮ ಅಧಿಕಾರಿಗಳ ಜೊತೆ ಮಿಲಾಪಿಯಾಗಿ ರೂ.23,480/- ಅಂತ ಬರೆಸಿಕೊಂಡು ಬಂದು ದಾಖಲಿಸಿರುತ್ತೇನೆ ಎಂದರೆ ಸರಿ. ನಾನು ಒಕ್ಕಲುತನದಿಂದ ಪ್ರತಿವರ್ಷ ರೂ.2 ಲಕ್ಷ ಬರುತ್ತಿತ್ತು ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ನಮ್ಮ ಜಮೀನಿನ ಸರ್ವೆ ನಂಬರ ಹೇಳಲು ಬರುತ್ತದೆಯೋ ಎಂದು ಕೇಳಲು ಸದರಿ ಜಮೀನುಗಳನ್ನು ಮಾರಾಟ ಮಾಡಿರುತ್ತೇವೆ, ನನ್ನ ಹೆಸರಿನಲ್ಲಿ ಯಾವುದೇ ಜಮೀನು ಇರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಯಾವುದೇ ಒಕ್ಕಲುತನ

ಮಾಡುವುದಿಲ್ಲ, ನನಗೆ ಒಕ್ಕಲುತದಿಂದ ಪ್ರತಿವರ್ಷ ರೂ.2 ಲಕ್ಷ ಆದಾಯ ಬರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೋಟಾರು ಸೈಕಲ ಸಾಯಬಣ್ಣ ನಡೆಸುತ್ತಿದ್ದನು. ಸದರಿ ವಾಹನ ನಡೆಸಲು ಸಾಯಬಣ್ಣನಿಗೆ ಚಾಲನಾ ಪರವಾಗನಿ ಇರಲಿಲ್ಲ ಎಂದರೆ ಸರಿಯಲ್ಲ.

**02.** ನಾವು ಹುಣಸಗಿಯಿಂದ ಕಾಮನಟಗಿಗೆ ಹೊರಟಿದ್ದೆವು. ಓಮಿನಿ ಕಾರು ಹುಣಸಗಿಯಿಂದ ಬರುತ್ತಿತ್ತು. ಸದರಿ ಅಪಘಾತವಾದ ರಸ್ತೆ 60 ಅಡಿ ಅಗದ ರಸ್ತೆ ಇರುತ್ತದೆ ಎಂದರೆ ಸರಿ. ಅಲ್ಲಿ ಮಧ್ಯ ಡಿವೈಡರ ಇರುತ್ತದೆ ಎಂದರೆ ಸರಿಯಲ್ಲ. ಓಮಿನಿ ಕಾರು ಬರುವುದನ್ನು ನಾನು ಅರ್ಧ ಕಿ.ಮಿ ದೂರದಲ್ಲಿ ನೋಡಿರುತ್ತೇನೆ. ನಮ್ಮ ವಾಹನ ಕಚ್ಚಾ ರಸ್ತೆಯಲ್ಲಿ ಇತ್ತು. ಅಪಘಾತವಾಗುವಾಗಲೂ ಸಹ ನಮ್ಮ ವಾಹನ ಕಚ್ಚಾ ರಸ್ತೆಯಲ್ಲಿ ಇತ್ತು. ಅಪಘಾತವಾಗುವಾಗ ಮಾರುತಿ ಕಾರು ಕಚ್ಚಾ ರಸ್ತೆಯಲ್ಲಿ ಇತ್ತು ಎಂದರೆ ಸರಿ. ನಮ್ಮ ಮತ್ತು ಕಾರ ಮಧ್ಯದ ರಸ್ತೆ ಅಂದಾಜು 3-4 ಅಡಿ ಅಂತರದಲ್ಲಿ ಇತ್ತು. ಸಾಯಬಣ್ಣನ ವಾಹನ ಚಾಲನ ಪರವಾನಿಗೆ ಪತ್ರ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿಯವನಿಗೆ ಯಾವುದೇ ವಾಹನ ಚಾಲನ ಪರವಾನಿಗೆಪತ್ರ ಇರುವುದಿಲ್ಲ, ಸದರಿ ದಾಖಲೆ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೋಟಾರು ಸೈಕಲಗೆ ವಿಮೆ ಪಾಲಸಿ ಇರುವ ಬಗ್ಗೆ ನಾನು ನೋಡಿರುವುದಿಲ್ಲ. ಮೋಟಾರು ಸೈಕಲಗೆ ವಿಮೆ ಪಾಲಸಿ ಮತ್ತು ಡಿ.ಎಲ್ ಇರುವುದಿಲ್ಲ, ಆತನಿಗೆ ವಾಹನ ಚಲಾಯಿಸಲು ಬರುವುದಿಲ್ಲ, ಆದ್ದರಿಂದ ಸಾಯಬಣ್ಣನ ತಪ್ಪಿನಿಂದ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ಪೋಲೀಸರೊಂದಿಗೆ ಮಿಲಾಪಿಯಾಗಿ ಈ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಅಪಘಾತದಲ್ಲಿ ನನಗೆ ಗಾಯಗಳು ಆಗಿರುತ್ತವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನಮ್ಮ ಕಚೇರಿಯಲ್ಲಿ ಈಗಲೂ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಕಾರಿಗೆ ಯಾವುದೇ ಪರವಾನಿಗೆ ಇಲ್ಲ, ಪರ್ಮಿಟ್ಲ್ಲ ಇಲ್ಲ ಅದ್ದರಿಂದ ಅವರೆ ಪರಿಹಾರ ಕೊಡಲು ಬಾದ್ಯಸ್ತರಾಗುತ್ತಾರೆ ಎಂದು ಸುಳ್ಳು ಸಾಕ್ಷಿ

ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಹೆಚ್ಚು ಪರಿಹಾರ ಪಡೆಯಲು ಮೆಡಿಕಾಲ ಶಾಪ್ನಿಂದ ಸುಳ್ಳು ಬಿಲ್‌ಗಳನ್ನು ಪಡೆದು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಎಲ್ಲಾ ಪರಿಹಾರವನ್ನು 1 ನೇ ಎದುರುದಾರನೇ ಕೊಡಬೇಕಾಗುತ್ತದೆ, ನಾನು 2 ನೇ ಎದುರುದಾರನ ಮೇಲೆ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲಾ**

(ತೆರೆದ ನ್ಯಾಯಾಲಯದಲ್ಲಿ ಸಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಸುರಪುರ.